ಸಾರಿಗೆ ಸಂಸ್ಥೆಯು ಕೆಲವು ಮಾರ್ಗಗಳಲ್ಲಿ ನಷ್ಟ ಹೊಂದಿರುವುದು

೫೮೦. ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು).—ಮಾನ್ಯ ಸಾರಿಗೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಸಾರಿಗೆ ಸಂಸ್ಥೆಯವರು ನಡೆಯುತ್ತಿರುವ ಕೆಲವು ಮಾರ್ಗಗಳಲ್ಲಿ ಅನೇಕ ವರ್ಷಗಳಿಂದ ನಷ್ಟ ಅನುಭವಿಸುತ್ತಿರುವುದರಿಂದ ಅಂತಹ ಮಾರ್ಗಗಳನ್ನು ಖಾಸಗಿ ಸಂಸ್ಥೆಗಳಿಗೆ ಕೊಡುವ ಆಲೋಚನೆ ಸರ್ಕಾರಕ್ಕೆ ಇದೆಯೇ ?

ಆ) ಹಾಗಿದ್ದಲ್ಲಿ ಅಂತಹ ಒಟ್ಟು ಮಾರ್ಗಗಳೆಷ್ಟು ?

ಇ) ಹಾಗಿಲ್ಲದಿದ್ದಲ್ಲಿ ದಕ್ಷತೆಯಿಂದ ಪ್ರಯಾಣಿಕರಿಗೆ ಅನಾನುಕೂಲವಾಗದಂತೆ ಬಸ್ಸುಗಳನ್ನು ನಡೆಸಲು ಕೈಗೊಂಡಿರುವ ಕಾರ್ಯಕ್ರಮಗಳೇನು ?

ಶ್ರೀ ಕೆ.ಜೆ. ಜಾರ್ಜ್ (ಸಾರಿಗೆ ಮಂತ್ರಿಗಳು).—

ಅ) ಇಲ್ಲ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪ್ರಯಾಣಿಕರಿಗೆ ಅನುಕೂಲವಾಗುವಂತೆ ಬಸ್ಸುಗಳನ್ನು ನಡೆಸಲು ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

೧) ಬಸ್ಸುಗಳನ್ನು ಸಕಾಲದಲ್ಲಿ ಓಡಿಸುವುದು.

೨) ಹೆಡ್ಯೂಲುಗಳನ್ನು ಸೂಕ್ತ ಮಾರ್ಪಾಟು ಮಾಡಿ ಮುಂದುವರಿಸುವುದು ಅಥವಾ ವಿಭಿನ್ನ ಮಾರ್ಗದಲ್ಲಿ ಪ್ರಯಾಣಿಕರ ಅವಶ್ಯಕತೆಯನ್ನು ಪರಿಗಣಿಸಿ ಬಸ್ಸುಗಳನ್ನು ಓಡಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

ಬಿ.ಟಿ.ಎಸ್. ವಾಹನ ಬಲ ಹೆಚ್ಚಿಸಲು ವಿಶ್ವ ಬ್ಯಾಂಕಿನ ನೆರವು.

೫೮೬. ಶ್ರೀ ಪೆರಿಕಾಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಿ.ಟಿ.ಎಸ್. ವಾಹನ ಬಲ ಹೆಚ್ಚಿಸಲು ಸರ್ಕಾರವು ವಿಶ್ವಬ್ಯಾಂಕಿನ ನೆರವನು ಕೋರಿದೆಯೇ ?

ಆ) ಹಾಗಿದ್ದಲ್ಲಿ ಪ್ರಸ್ತಾವನೆಯನ್ನು ಯಾವಾಗ ಕಳುಹಿಸಲಾಯಿತು.

ಇ) ವಿಶ್ವಬ್ಯಾಂಕಿನಿಂದ ಕೋರಲಾದ ನೆರವಿನ ಮೊತ್ತವೆಷ್ಟು ?

ಈ) ವಿಶ್ವಬಾಂಕಿನ ನೆರವಿನಿಂದ ಕೊಳ್ಳಲು ಉದ್ದೇಶಿಸಿರುವ ಬಿ.ಟಿ.ಎಸ್. ಬಸ್‌ಗಳ ಸಂಖ್ಯೆ ಎಷ್ಟು ?

ಉ) ವಿಶ್ವಬ್ಯಾಂಕ್ ಈ ನೆರವನ್ನು ಮಂಜೂರು ಮಾಡಿದೆಯೇ ?

ಊ) ಹಾಗಿಲ್ಲದಿದ್ದಲ್ಲಿ ಯಾವಾಗ ವಿಶ್ವಬ್ಯಾಂಕ್ ನೆರವು ಸಿಗಬಹುದು ?

ಶ್ರೀ ಕೆ.ಜೆ. ಜಾರ್ಜ್ (ಸಾರಿಗೆ ಮಂತ್ರಿಗಳು).—

ಅ) ಹೌದು.

ಆ) ಬೆಂಗಳೂರು ನಗರ ಸಾರಿಗೆಗೆ ಸಂಬಂಧಿಸಿದಂತೆ ಪ್ರಸ್ತಾವನೆಯನ್ನು ಬಿ.ಎಂ.ಆರ್.ಡಿ.ಎ.ಗೆ ೧೯೮೯ರ ಆಗಸ್ಟ್ ತಿಂಗಳಿನಲ್ಲಿ ಕಳುಹಿಸಲಾಗಿದೆ.

ಇ) ಬೆಂಗಳೂರು ನಗರ ಸಾರಿಗೆಗೆ ಸಂಬಂಧಿಸಿದಂತೆ ಬಸ್ಸುಗಳನು ಕೊಳ್ಳಲು, ಡಿಪೋಗಳು, ಕಾರ್ಯಾಗಾರ ಇತ್ಯಾದಿ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ೧೦೯ ಕೋಟಿ ೧೨ ಲಕ್ಷ ರೂ.ಗಳ ನೆರವನ್ನು ಕೋರಲಾಗಿದೆ.

ಈ) ೧೩೧೧.